ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ : 757

ಸದಸ್ಯರ ಹೆಸರು : ಶ್ರೀ. ಎನ್.ಎಸ್. ಬೋಸ್ ರಾಜು

ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 17.12.2018

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯಲ್ಲಿರುವ ತೋಟಗಾರಿಕೆ ಇಲಾಖೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು:	ರಾಯಚೂರು ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 2018-19ನೇ ಸಾಲಿನಲ್ಲಿ ಕೆಳಕಾಣಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1) ಕೇಂದ್ರವಲಯ, ರಾಜ್ಯವಲಯ ಮತ್ತು ಜಿಲ್ಲಾವಲಯ ಯೋಜನೆಯಡಿ ಒಟ್ಟಾರೆ ರೂ.15.66 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2) ಈ ಯೋಜನೆಗಳಡಿಯಲ್ಲಿ ನವೆಂಬರ್-2018ರ ಮಾಹೆಯ ಅಂತ್ಯಕ್ಕೆ ರೂ.4.95 ಕೋಟಿ ಅನುದಾನ ವಿನಿಯೊಗಿಸಲಾಗಿದೆ. 3) ಸಾಧಿಸಲಾದ ಪ್ರಗತಿ ವರದಿಯನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ ಪಟ್ಟಣ ಹಾಗೂ ರಾಜಲಬಂಡಾದಲ್ಲಿ ಇರುವ ತೋಟಗಾರಿಕೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ ಪಟ್ಟಣ ಹಾಗೂ ರಾಜಲಬಂಡಾದಲ್ಲಿ ಇರುವ ತೋಟಗಾರಿಕೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳ ವಿವರ ಕೆಳಕಂಡಂತಿವೆ. 1) ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ತೋಟಗಾರಿಕೆ ಕ್ಷೇತ್ರವನ್ನು 2017-18ನೇ ಸಾಲಿನಲ್ಲಿ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಕೃಷಿಹೊಂಡ, ಕಾಂಪೌಂಡ್ ಗೋಡೆ ನಿರ್ಮಾಣ, ಸಸ್ಯಾಭಿವೃದ್ಧಿ ಮತ್ತು ಕ್ಷೇತ್ರ ನಿರ್ವಹಣೆಗಾಗಿ ವಿವಿಧ ಯೋಜನೆಗಳಡಿ ಒಟ್ಟು ರೂ.84.52 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

		2) 2018-19ನೇ ಸಾಲಿನಲ್ಲಿ ಸದರಿ ಕ್ಷೇತ್ರದಲ್ಲಿ ಸಸ್ಯಾಭಿವೃದ್ಧಿ, ಮೂಲಭೂತ ಸೌಕರ್ಯಗಳ ನಿರ್ಮಾಣ, ಕ್ಷೇತ್ರ ನಿರ್ವಹಣೆಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ರೂ.61.41 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 3) ಮಾನ್ವಿ ಪಟ್ಟಣದ ಕಛೇರಿ ಬಳಿಯಿರುವ ಸಸ್ಯಾಗಾರದಲ್ಲಿ ವಿವಿಧ ಅಲಂಕಾರಿಕ ಗಿಡಗಳನ್ನು ಕುಂಡಗಳಲ್ಲಿ ಅಭಿವೃದ್ಧಿಪಡಿಸಿ ತಾಲ್ಲೂಕಿನಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಿಗೆ ನೀಡಲಾಗುತ್ತಿದೆ. 4) ತಾಲ್ಲೂಕಿನ ರೈತರಿಗೆ ತೋಟಗಾರಿಕೆ ಇಲಾಖೆಯು ಅನುಷ್ಠಾನ ಮಾಡುತ್ತಿರುವ ವಿವಿಧ ಯೋಜನೆಗಳ ಸವಲತ್ತುಗಳನ್ನು ಹಾಗೂ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತಿದೆ. 5) ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ರಾಜಲಬಂಡಾ ತೋಟಗಾರಿಕೆ ಕ್ಷೇತ್ರದಲ್ಲಿ 2016-17ನೇ ಸಾಲಿನಲ್ಲಿ ರೂ.35.00 ಲಕ್ಷಗಳ ವೆಚ್ಚದಲ್ಲಿ ಕ್ಷೇತ್ರದ ಸುತ್ತ ಚೈನ್ ಲಿಂಕ್ ಫೆನ್ಸ್ ನಿರ್ಮಿಸಲಾಗಿದೆ. 2017-18ನೇ ಸಾಲಿನಲ್ಲಿ ರೂ.1.56 ಲಕ್ಷಗಳನ್ನು ವಿನಿಯೋಗಿಸಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ಲಿಂಬೆ ಮತ್ತು ಒಂದು ಹೆಕ್ಟೇರ್ ಪ್ರದೇಶದಲ್ಲಿ ಆಪಲ್ ಬೆರ್ ಬೆಳೆಸಲಾಗಿದೆ. 2018-19ನೇ ಸಾಲಿನಲ್ಲಿ ಹನಿ ನೀರಾವರಿ ಅಳವಡಿಸಲು ರೂ.2.90 ಲಕ್ಷ ಅನುದಾನ ಹಂಚಿಕೆ ಮಾಡಲಾಗಿದೆ.

ಸಂಖ್ಯೆ: ತೋಇ 428 ತೋಇವಿ 2018

(ಎಂ.ಸಿ.ಮನಗೂಳಿ)

ತೋಟಗಾರಿಕೆ ಸಚಿವರು

LCQ 757

ಅನುಬಂಧ - 1				
2018-19ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳುತ್ತಿರುವ ಯೋಜನೆಗಳು ಹಾಗೂ ನವೆಂಬರ್ 2018 ರ ಅಂತ್ಯಕ್ಕೆ ಪ್ರಗತಿ ವರದಿ				
ಕ್ರ.ಸಂ.	ಯೋಜನೆಗಳು	ವಾರ್ಷಿಕ ಆರ್ಥಿಕ ಪ್ರಗತಿಯ ವಿವರ (ರೂ. ಲಕ್ಷಗಳಲ್ಲಿ)		
		ವಾರ್ಷಿಕ ಅನುದಾನ	ಬಿಡುಗಡೆ	ಸಾಧನೆ
ಕೇಂದ್ರವಲಯ ಯೋಜನೆಗಳು				
1	S-03 ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)	385.00	198.67	175.92
2	S-12 ರಾಷ್ಟ್ರೀಯ ತೋಟಗಾರಿಕೆ ಮಿಷನ್	620.36	395.65	76.13
3	S-17 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	63.44	63.44	13.24
4	S-13 ರಾಷ್ಟ್ರೀಯ ಆಯುಷ್ ಮಿಷನ್	1.20	0.00	0.00
	ಒಟ್ಟು	**1070.00**	**657.76**	**265.29**
ರಾಜ್ಯವಲಯ ಯೋಜನೆಗಳು				
1	S-02 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ	19.89	4.90	4.90
2	S-10 ಸಮಗ್ರ ತೋಟಗಾರಿಕಾ ಅಭಿವೃದ್ಧಿ	176.43	117.62	103.04
3	S-07 ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ	16.35	9.00	8.90
4	S-14 ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ	0.60	0.60	0.00
5	S-11 ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	32.99	8.25	8.25
6	S-20 ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ	1.00	0.50	0.00
7	S-24 ಕೃಷಿ ಭಾಗ್ಯ ಯೋಜನೆ	100.04	82.97	22.34
8	ಕರ್ನಾಟಕ ಜಲಾಯನ ಅಭಿವೃದ್ಧಿ ಯೋಜನೆ-II (ಸುಜಲಾ-III)	44.30	29.53	2.69
	ಒಟ್ಟು	**391.60**	**253.37**	**150.12**
ಜಿಲ್ಲಾವಲಯ ಯೋಜನೆಗಳು				
1	D-02 ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ	25.00	25.00	15.45
2	D-03 ತೋಟಗಾರಿಕೆ ಕಟ್ಟಡಗಳು	50.00	50.00	50.00
3	D-04 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	15.00	15.00	6.92
4	D-05 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ	6.00	6.00	3.92
5	D-06 ಪ್ರಚಾರ ಮತ್ತು ಸಾಹಿತ್ಯ	3.00	3.00	1.50
6	D-09 ರೈತರಿಗೆ ಸಹಾಯ	4.00	4.00	2.50
7	D-10 ರೈತರಿಗೆ ತರಬೇತಿ	1.00	1.00	0.00
	ಒಟ್ಟು	**104.00**	**104.00**	**80.29**
	ಒಟ್ಟಾರೆ	**1565.60**	**1015.13**	**495.70**